ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 3, Nov-Dec 2021, Pp 42-46**
**©*IIMRD*, Mysuru**
IIMRD JOURNALS

**www.iimrd.com**

# ಪಂಪ ಭಾರತದಲ್ಲಿ ನಿಸರ್ಗ

**ಚಂದ್ರಕಾಂತ ರೇವಣ್ಣಸಿದ್ದಪ್ಪ[1]**

[1]ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

## ಸಾರಾಂಶ (Abstract)

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಚಂಪೂ ಸಾಹಿತ್ಯ'ವು ವಿಶಿಷ್ಟ ಪ್ರಕಾರ. ಇದು ಕ್ರಿ.ಶ.೧೦ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಬೃಹತ್ ಮಹಾಕಾವ್ಯಗಳ ಬೆಳವಣಿಗೆಯಲ್ಲಿ ದೊಡ್ಡ ಪ್ರಾಮುಖ್ಯತೆ ಪಡೆದಿದೆ. ಅಪಾರ ಪಾಂಡಿತ್ಯ ಮತ್ತು ಪ್ರತಿಭೆಯ ಫಲವಾಗಿ ಪಂಪಾದಿಗಳಿಂದ ಚಂಪೂ ಸಾಹಿತ್ಯ ವಿಶೇಷ ಮೆರಗು ಪಡೆಯಿತು. ಆಯಾ ಕಾಲಘಟ್ಟದ ಕವಿಗಳು ಅವಲಂಭಿಸಿದ ಧರ್ಮ ಮತ್ತು ಆಶ್ರಯರ ಹೆಸರಿನಲ್ಲಿ ಕೃತಿಗಳನ್ನು ಹೊರ ತಂದರು.

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಪಂಪ, ಕಾವ್ಯಗಳು, ಪ್ರಕೃತಿ, ಕಾಲಪುರುಷ.

## ಪೀಠಿಕೆ

ಪಂಪ ಕೃತಿಗಳಲ್ಲಿ ನಿಸರ್ಗದ ಪಾಲು ಬಹು ದೊಡ್ಡದು. ಅಷ್ಟಾದಶವರ್ಣನೆಯ ಪರಿಮಿತಿಯಲ್ಲಿ ಅವರ ಪ್ರತಿಭೆಯ ಸ್ವಾತಂತ್ರ್ಯವನ್ನು ನಿರ್ವಹಿಸಬೇಕಿತ್ತು. ಪಂಪನು ಸಹ ತನ್ನ ಕಾವ್ಯಗಳಲ್ಲಿ ಸಹಜವಾಗಿ ನಿಸರ್ಗದ ಚಿತ್ರಣವನ್ನು ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ತನಗೆ ಪ್ರಿಯ ಹಾಗೂ ಹಿತದ ಸಂದರ್ಭವನ್ನು ವೈಯಕ್ತಿಕ ಆಸೆ ಮತ್ತು ಹಂಬಲವನ್ನು ಅಭಿವ್ಯಕ್ತಿಗೊಳಿಸಲು ನಿಸರ್ಗದ ಮೊರೆ ಹೋಗಿದ್ದಾನೆ. ವಿಕ್ರಮಾರ್ಜುನವಿಜಯ ಕಾವ್ಯದಲ್ಲಿ ನಿಸರ್ಗದ ಚಾಕಚಕ್ಯತೆಯಲ್ಲಿ ಮನ್ಮಥನ ಅನುಭವವನ್ನು ಉತ್ಕಟದ ಮನಸ್ಸಿಗೆ ಆಗುವ ಪರಿ ಇಲ್ಲಿದೆ.

*"ಬಿರಯಿಯ ಮಿೞ್ತುವೆಂ ಮಿದಿದೊಡಲ್ಲದಣಂ ಮುಳಿಸಾಱದೆಂದು*
*ಪಲ್ಮೊರೆದಪನಿಲ್ಲ ಮನ್ಮಥನಿದಂ ಪುಗಲಿಂಗಡಿಮೆಂದು ಬೇಟಕಾ*
*ಱರನಿರದೊೞೆ ಸಾಱೆ ಜಡಿವಂತೆಸೆಗುಂ ಸಹಕಾರ ಕೋಮಳಾಂ*
*ಕುರ ಪರಿತುಷ್ಟ ಪುಷ್ಟ ಪರಪುಷ್ಟಗಳ ಧ್ವನಿ ನಂದನಂಗಳೊಳ್"*

*(2ನೇ ಆಶ್ವಾಸ 13ನೇ ಪದ್ಯ. ಪಂಪಭಾರತ)*

ಚಿಗುರು ಮತ್ತು ಕಿರುಗೊಂಬೆಗಳ ಮೊಳಕೆಗಳು ಕಾಮರಸವನ್ನು ಜಿನಿಗಿಸಿತು ಎಂಬ ಮಾತು ನಿಸರ್ಗದ ಸಹಜ ಪ್ರಕ್ರಿಯೆಯಲ್ಲಿ ವ್ಯಕ್ತಗೊಳಿಸಿದ್ದಾನೆ. ಮನ್ಮಥನ ಆಸೆ ಸ್ವಾಭಾವಿಕ ಮತ್ತು ಮರದ ಚಿಗುರು ಸ್ವಾಭಾವಿಕ.

*Please cite this article as: ಚಂದ್ರಕಾಂತ ರೇವಣ್ಣಸಿದ್ದಪ್ಪ. (2021). ಪಂಪ ಭಾರತದಲ್ಲಿ ನಿಸರ್ಗ ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 42–46.*

ಮನ್ಮಥನ ಸೇವೆಯಾಗುವ ಹಾಗೆ ನಿಸರ್ಗವು ಪ್ರೇರಪಿಸಿದಂತೆಯಾಯಿತು. ಅಲ್ಲದೆ ದೈಹಿಕ ಆಸೆಯ ಕಸುವ ಹೆಚ್ಚಿಸುವ ತಿವ್ರ ಶಕ್ತಿಯೂ ಇದೆ.

ವಿರಹಕ್ಕೆ ಮನ್ಮಥನ ಸಕ್ಯತೆ ಬೆಳದರೆ ಶೃಂಗಾರ ರಸ ಪೋಷಣೆಯಾಗಿ ಮಿಲನೋತ್ಸಾಹಕ್ಕೆ ಕಾತರಿಸುವಷ್ಟು ಪ್ರಬಲವಾಗುತ್ತದೆ. ಹಾಗೇ ಪ್ರಕೃತಿಯ ಈ ಸಹಜ ಚುರುಕುತನವೂ ಅತಿ ಪರಿಣಾಮಯಾಗಿ ಸೂಕ್ಷ್ಮದಲ್ಲಿ ಪರಿಭಾವಗೋಳ್ಳುವಂತೆ ಮೈಮರಗೊಳ್ಳುವರು. ಅವುಗಳ ಮುನ್ನಾಲೋಚನೆಯಿಂದಲೇ ಬೇರೆ–ಬೇರೆಯಾದ ಶಬ್ಧಗಳನ್ನು ಮಾಡುತ್ತವೆ. ಅಂತಯೇ ಇಲ್ಲಿಯೂ ಎಳೆಮಾವಿನ ಚಿಗುರುನ್ನು ತಿಂದ ಕೋಗಿಲೆಯು ವಿರಹಳಾದ ರೀತಿಯಲ್ಲಿ ತನ್ನ ಕಂಠದಿಂದ ಕೊರಳನಾದವು ಆಶ್ರಮದಲ್ಲಿ ಹೊರಡಿಸಿತು ಎಂಬುದನ್ನು ಕಾಣುತ್ತೇವೆ.

ಪಂಪ ಕವಿಯು ಪ್ರಕೃತಿಯ ತೆಕ್ಕೆಯಲ್ಲಿ ಬೆಳೆದವನು. ಆಕರ್ಷಣೆ ಮತ್ತು ಆಸ್ವಾದನೆಯಲ್ಲಿ ಅದು ಕಾವ್ಯದಲ್ಲಿ ಪರಿಣಾಮಕಾರಿಯಾಯಿತು. ಆತನ ಕಲ್ಪನೆಯ ಒತ್ತಾಸೆಗಳಿಗೆ ಪ್ರೇರಕವಾಯಿತು. ಪ್ರಕೃತಿಯಲ್ಲಿನ ಈ ಸಹಜತೆ ಮನುಷ್ಯ ಮತು ಪ್ರಕೃತಿಯ ಸಹ ಸಂಬಂಧವು ಬೇರು ಚಿಗುರಿನಷ್ಟೆ. ಇಲ್ಲಿ ಮೂಲ ತಿರುಳು ಮನುಷ್ಯನ ಪ್ರೀತಿ–ಪ್ರೇಮದ ಕಾರಣ ಶಕ್ತಿ ಈ ನಿಸರ್ಗ ದತ್ತುವಿನ ಪ್ರಧಾನ.

***"ಆಗಳಾ ಬಸಂತರಾಜನ ಬರವಿಂಗೆ ಗುಡಿಗಟ್ಟಿದಂತೆ ಬಳ್ವನ***
***ಬಳೆದಮಿಳಿರ್ವಶೋಕೆಯ ತಳಿರ್ಗಳುಮಾತನ ಬರವಿಂಗೆ ತೋರಣಂಗಟ್ಟಿದಂತೆ***
***ಬಂದ ಮಾಮರಂಗಳನಡರ್ದುತೊಡರ್ದಳಗೊಂಬುಗಳ್ವಿಡಿದು.......***
***ಕಾಮರಸವುಗುವಂತುಗುವ ಸೊನೆಯ ಸೋನೆಗಳು***
***ಮನೊಳಕೊಂಡು ತದಾಶ್ರಮದ ನಂದನವನಂಗಳ್***
***ಜನಂಗಳನನಂಗಂಗೆ ತೊಟಿಶ್ತುವೆಸಂಗೆಯ್ಸಿದುವು"***

***(2ನೇ ಆಸ್ವಾಸ, ವಚನ, ಪಂಪಭಾರತ)***

ಪ್ರೀತಿ ಹುಟ್ಟಲು ಸಣ್ಣ ಸೊಬಗಿನ ಸಂದರ್ಭ ಸಾಕು 'ಪ್ರೀತಿಯಿಲ್ಲದೆ ಮೇಲೆ ಹೂ ಅರಳಿತು ಹೇಗೆ' ಎನ್ನುವ ಜಿ.ಎಸ್.ಶಿವರುದ್ರಪ್ಪರವರ ಮಾತನ್ನು ಈ ಸಂದರ್ಭದಲ್ಲಿ ನೆನೆಯುವುದು ಉತ್ತಮ. ಪ್ರೀತಿ ಎಂಬುದು ಒಂದು ಹೂವಿದ್ದಂತೆ ಮತ್ತು ಎಲ್ಲಕ್ಕಿಂತ ಹೆಚ್ಚು ಸುಂದರವಾದುದು ಮತ್ತು ಅಗೋಚರವಾದುದು ಕಾರಣ ಹೃದಯದಲ್ಲಿ ಬೆಳೆಯುವಂತದ್ದು ಅದರ ಸುಗಂಧ ಮಾತ್ರ ಹೊರಗಡೆಯಿಂದಲೂ ಕಾಣಬಹುದು. ಮನುಷ್ಯ ಪ್ರೇಮತ್ವವು ಹೃದಯದಲ್ಲಿ ಚಿಗುರಿ ಭೋಗತ್ವದಲ್ಲಿ ಸೌಖ್ಯಗೊಂಡು ಧನ್ಯತೆಯ ಭಾವ ಪ್ರಕಟಗೊಳ್ಳುತ್ತದೆಯೋ ಹಾಗೆಯೇ ಪ್ರಕೃತಿಗಳಲ್ಲಿಯೂ ಸಾಕಷ್ಟು ಸಖ್ಯದ ಮೈತ್ರಿ ಭಾವವನ್ನು ಪಡೆಯುತ್ತವೆ. ಅದರಲ್ಲೂ ವಸಂತಕಾಲ (ಕಾಲಪುರುಷ)ದ ಪ್ರಭಾವ ಪ್ರಕೃತಿಯಲ್ಲಿ ಮನುಷ್ಯನ ಆಸೆ, ಲವಲವಿಕೆ, ಉತ್ಸಾಹ, ಇಂಪು ಹೀಗೆ ಮುಂತಾದ ಭಾವಗಳ ಸೃಷ್ಟಿಸುವದರ ಜೊತೆಗೆ ನೋಟದ ಹೊರ ಆವರಣವು ಬೆಡಗು ಕಟ್ಟಿಕೊಡುತ್ತದೆ. ಅದು ಕೊಡುವ ರೂಪ ವಿಸ್ಮಯವೇ ಆಶ್ಚರ್ಯ ಮತ್ತು ಆನಂದದ ಭವ್ಯತೆ ತರುವುದು. ವಸಂತಮಾಸ ಬಂದರೇ ಸಾಕು ಈಡೀ ನಿಸರ್ಗದ ಸೊಬಗಿನ ಹುರುಪು ಬೇರೆಯಾಗುತ್ತದೆ.

ಕಾಲಪುರುಷ ಮತ್ತು ನಿಸರ್ಗ (ಪ್ರಕೃತಿ) ಆಗಮಿಕೆ ಮತ್ತು ಕಾಯುವಿಕೆ ಮತ್ತು ಒಂದಾಗುವಿಕೆಯನ್ನು ಸೂಚಿಸುತ್ತದೆ. ವಸಂತ ಮಾಸದಲ್ಲಿ ಪ್ರಕೃತಿಯು ಅಪ್ಪಟ ಸಿಂಗರಿಸಿದ ವಧು ವೇಷದವಳು ಆಸೆ, ಆಸಕ್ತಿಯಲ್ಲಿ

ತವಕಗೊಳ್ಳುವಂತೆ ಕಾಲ ಪುರುಷನ ಆಗಲುವಿಕೆಗೆ ಚೆಲುವು ಹೊತ್ತುಕೊಂಡು ಕಾಯುವಳು. ಅದರಲ್ಲೂ ಪಂಪ ಎಳೆ ಹೂವಿನ ಮಾಮರದ ರೂಪ ವಸಂತದ ಚೆಲುವಿಗೆ ಹೋಲಿಸಿದ್ದಾನೆ. ಒಟ್ಟಿನಲ್ಲಿ ನಿಸರ್ಗದ ಚೈತನ್ಯದ ಶಕ್ತಿ ಪಡೆದ ಪ್ರಕೃತಿ ಮಾತೆ ಮದುವಣಗಿತ್ತಿಯೇ ಸರಿ. ಕಾಲಪುರುಷನು ಮಧು ಮಗನಾಗಿ ಅವನಿಗಾಗಿ ಸ್ವಾಗತಿಸುವ ಅವಳು ಕಾಯುವಿಕೆಯಲ್ಲಿ ಸಿದ್ದತೆಯ ಹೇಗಿದೆ ಎಂಬುದು ತೋರುತ್ತದೆ. ತಣ್ಣನೇ ಬೀಸುವ ಗಾಳಿಯೇ ಅವರಿಬ್ಬರ ದಾಂಪತ್ಯಕ್ಕೆ ಮಂಗಳ ವಾದ್ಯ. ಅವರಿಬ್ಬರ ಆಗಮನದ ದಾರಿಯ ತುಂಬೆಲ್ಲಾ ಉದರಿದ್ದ ಕಳಿತ ಹೂವುಗಳು, ಭೋರ್ಗರೆದು ಭ್ರಮಿಸುವ ದುಂಬಿಗಳೂ....ಹೀಗೆ ಕಾಲಪುರುಷನ ಮಿಲನಕ್ಕೆ ಈಡೀ ನಿಸರ್ಗದೇವತೆ ಸಿದ್ದಳಾಗಿದ್ದಳು. ಇಲ್ಲಿ ನಿಸರ್ಗ ಚಟುವಟಿಕೆಗಳು ಮದುವೆಯ ಸಂಭ್ರಮವನ್ನು ತೋರಿಸುವ ರೂಪಕವನ್ನು ತೋರಿಸಿದ್ದಂತಾಗುತ್ತದೆ.

ನಿರಿಗೆ ನಿರಿಗೆಯಾಗಿ ಸೊಬಗಿಸುವ ಸಿಹಿಮಾವಿನ ಸಾಲಾಗಿರುವ ಗೊಂಚಲುಗಳೂ ಆತನ ಮೇಲೆನ ಪ್ರೀತಿಯನ್ನು ಪಡೆಯುವುದೆ ಆಗಿರುತ್ತದೆ. ಈ ರೀತಿಯಾಗಿ ಪ್ರಕೃತಿಯು ಮನುಷ್ಯನಲ್ಲಿರುವ ಸುಖ ಮತ್ತು ದುಃಖಗಳಲ್ಲಿ ಹೇಗೆ ಬೆರೆತಿರುತ್ತಾರೋ ಹಾಗೇ ಅದರ ಪ್ರೇಮದ ತುಡಿತವನ್ನು ವಸಂತನ ಬರುವಿಗಾಗಿ ಇರುವುದು. ಮನುಷ್ಯ ಪ್ರೇಮದ ಮಜಲುಗಳು ಪ್ರಕೃತಿಯಲ್ಲಿ ಕಾಣಲಾಗಿದೆ.

***"ಕವಿವ ಮದಾಳಿಯಿಂ ಮಸುಳನಾಗಿ ಪಯೋಜರಜಂಗಳೊಳ್ ಕವಿ***
***ಲ್ಗವಿಲನುಮಾಗಿ ಬಿಂದ ಮಲಯಾನಿಲನೂದೆ ತೆರಳ್ವ ಚೂತ***
***ಪಲ್ಲವದ ತೆರಳ್ಕೆ, ತದ್ವನ ವಿಳಾಸನಿಯುಟ್ಟು ದುಕೂಲದೊಂದು***
***ಪಲ್ಲವದ ತೆರಳ್ಕೆಯಂತೆಸೆಯ ಕಣ್ಗೆಸೆದಿರ್ದುವು ನಂದನಾಳಿಗಳ್"***
***(2ನೇ ಆಶ್ವಾಸಂ. 14ನೇ ಪದ್ಯ, ಪಂಪಭಾರತ)***

ಪಂಪನು ಮನುಷ್ಯನ ಆಸೆಯ ಫಲವನ್ನು ಹೇಗೆ ದುರಂತದಲ್ಲಿ ಅವಸಾನಗೊಳ್ಳುತ್ತದೆ ಎಂಬುದು ಪಾಂಡುಪಾತ್ರದ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಪ್ರಕೃತಿ ಮತ್ತು ಪುರುಷ ಸಂಬಂಧ ಬಯಕೆ ಸಾವಿನ ಚಿತೆಯ ಹಂತಕ್ಕೆ ಕೊಂಡುಯ್ಯುವಲ್ಲಿ ಮತ್ತು ಕೆಡಕಾಗುವಕೆಯಲ್ಲಿ ಪ್ರೇರಕವಾಗುವುದನ್ನು ಇಲ್ಲಿ ಗಮನಿಸಬಹದು. ಪಾಂಡು ಮಡದಿಯೊಂದಿಗೆ ಕೂಡದಷ್ಟು ಶಾಪಗ್ರಸ್ತಗೊಳಗಾಗಿದ್ದಾನೆ. ಆಶ್ರಮದ ಜೀವನ ಮಡದಿಯರೊಂದಿಗೆ ಏಕಾಂತದಲ್ಲಿ ಕಳೆಯಬೇಕು. ತೀರ ಕಷ್ಟವಾದ ಬದಕು ಅದು ಆಸೆಗೆ ಆಸ್ಪದ ಕೊಡುವ ಹಾಗಿಲ್ಲ,

ಈ ಸಂದರ್ಭವನ್ನು ಕವಿ ಪಂಪನು ಪ್ರಕೃತಿ ಪುರುಷನ ಜೊತೆಗೆ ಮನುಷ್ಯ ಪುರುಷನ ಮಾನಸಿಕ (ಪಾಂಡುವಿನ) ಸ್ಥಿತಿಯನ್ನು ಮಾರ್ಮಿಕತೆಯಿಂದ ಚಿತ್ರಿಸಿದ್ದಾನೆ. ಒಂದು ಕಡೆ ಶಾಪಗ್ರಸ್ತನಾದ ಪಾಂಡು ಹಾಗೂ ಅದೇ ಆಶ್ರಮದಲ್ಲಿ ಇರ್ವರ ಹೆಂಡತಿಯರು. ಮತ್ತೊಂದು ಕಡೆ ಉಕ್ಕಿ ಹರಿಯುವಂತ ಮನ್ಮಥನ ಪಾಸಾಯಾವಾದ ವಸಂತ ರಾಜನು ತ್ರಿಕೋನದಲ್ಲಿ ಯಾರಿಗೆ ಸಂತೃಪ್ತಿ, ಯಾರಿಗೆ ಹಾನಿ ತರುವನೆಂದು ತಿಳಿಯದು. ಆದರೂ ಆ ಪ್ರಕೃತಿಯಲ್ಲಿ ಅಧಿದೇವತೆಯೂ ಎಚ್ಚರಿಕೆಯನ್ನು ನೀಡುತ್ತಿದ್ದಾಳೆ. ಅಂತೆಯೇ ಮುತ್ತಿಕೊಳ್ಳಲು ಸಿದ್ಧವಾಗಿರುವ ದುಂಬಿಗಳಿಂದ ವಸಂತನೂ ಮಾಸಿ ಹೋಗಿದ್ದಾನೆ. (ಪಾಂಡು) ತಾವರೆಯ ಪರಾಗಗಳಿಂದ ಮಾಸಲು ಕೆಂಪು ಬಣ್ಣದವನಾಗಿಯೂ (ಸಾವಿನ ಮುನ್ಸೂಚನೆ) ತಲೆ ದೋರಿದೆ ಮಲಯ

ಮಾರುತನು ಬೀಸುತ್ತಿರುವುದರಿಂದ. ಚದುರವ, ಅಲ್ಲಾಡುವ ಎಳೆಮಾವಿನ ಮರದ ಚಿಗುರುಗಳ ಸ್ಥಿತಿ, ಆ ವನಲಕ್ಷ್ಮಿಯು ಉಟ್ಟ ರೇಷ್ಮೆಯ ಸೀರೆಯ ಸೆರಗಿನ ಹೊಯ್ದಾಟವು ಅತ್ಯಂತ ಪ್ರಕಾಶ ಮಾನವಾಗಿತ್ತು. ಈಡೀ ಆಶ್ರಮದ ಸುತ್ತಣ ತೋಟದ ಸಾಲುಗಳು ಕಣ್ಣಿಗೆ ಮನೋಹರವಾಗಿರುವಂತೆ ಕಾಣುತ್ತಿತ್ತು. ಪಂಪನು ಸಹಜವಾಗಿ ಪ್ರಕೃತಿಯೊಂದಿಗಿನ ಸಖ್ಯದ ಭಾವವನ್ನು ಹೀಗೆ ಜೋಡಿಸಿದ್ದಾನೆ. ಅದನ್ನು ದುರಂತಕ್ಕೆ ಈಡು ಮಾಡುವ ಬಗೆಯನ್ನು ಮಾಡಿದ್ದಾದರೂ ಏಕೆ? ಎಂದು ಪ್ರಶ್ನೆಗಳು ವಿಳಂಬವಿಲ್ಲದೆ ಬರುತ್ತವೆ. ಪಾಂಡುವಿನ ಕಾಮಾಗ್ನಿ ಕೆರಳಿತು, ಇತ್ತ ಶಾಪವನ್ನು ಮರೆತನು. ಸುಖದ ತುದಿಯಲ್ಲಿ ಸಾವು ಬಂದಂತೆ ಕಾಣುತ್ತದೆ. ಆ ವಿಚಾರವನ್ನು ಹೀಗೆ ಚಿತ್ರಿಸುತ್ತಾನೆ.

***"ಪೋಗದೆ ಪಾಡುತಿರ್ಪಳಿಯ ಬೃಂಹಿತಮಾಗಿರೆ ಚಂದ್ರಕಾಂತಿ ಕಾ***
***ಯ್ಪಾಗಿರೆ ಬೀಸುವೊಂದೆಲರೆ ಬೀಸುವುದಾದರೆ ಕಾಯ್ಗಳಿಂದ ಮಿಂ***
***ಬಾಗಿರೆ ಸೋರ್ವ ಸೋನೆ ಮದಮಾಗಿರೆ ಮಾವಿನ ಬಂದ ಕೋಡೆಕೋ***
***ದಾಗಿರೆ ಕೋಡುಗೊಂಡು ಪರಿದತ್ತು ವಸಂತಗಜಂ ವಿಯೋಗಿಯಂ"***

***(2ನೇ ಆಶ್ವಾಸ, 15ನೇ ಪದ್ಯ, ಪಂಪಭಾರತ)***

ಸ್ವರ್ಗವೇ ಭೂಮಿಯನ್ನು ಆವರಿಸಿದಂತೆ ಆ ವನವು ಸುಂದರವಾಗಿ ಶೃಂಗಾರಗೊಂಡಿತ್ತು. ಆ ವನವನ್ನು ಬಿಟ್ಟು ಹೋಗಲು ಅಸಾಧ್ಯ ಎಂಬಂತೆ ಅಲ್ಲಿಯೇ ಹಾರಾಡುತ್ತಿರುವ ದುಂಬಿಗಳು, ಆನೆಯ ಘೀಂಕಾರವಾಗಿರಲು, ಬೆಳದಿಂಗಳೇ ಅದರ ಕೋಪವಾಗಿರಲು, ಬೀಸುವಂತಹ ಸುಗಾಳಿಯೇ ಬೀಸಣಿಗೆಯಾಗಿರುವಾಗ, ಕಾಯಿಗಳಿಂದ (ಗಿಡಗಳಲ್ಲಿ ಬಿಟ್ಟಿರುವ ಫಲಬರಿತವಾದ ಮಾವಿನ ರಸವು ಹನಿ–ಹನಿಯಾಗಿ ಭೂಮಿಯನ್ನು ಸ್ಪರ್ಶಿಸುವ ಸಂದರ್ಭವು ಆಕಾಶದಿಂದ ಮಳೆ ಹನಿಗಳು ಭೂಮಿಯನ್ನು ತಾಕಿದಂತೆ) ಸೋರುತ್ತಿರುವ ಸೋನೆ (ಸೋನೆ–ಎಂದರೇ ಒಂದರ್ಥದಲ್ಲಿ  ಬಂಗಾರ, ಮತ್ತೊಂರ್ಥ ಹನಿ ಹನಿಯಾಗಿ ಬರುವ ಮಳೆ) ಮದೋದಕವಾಗಿರಲು ಮಾವಿನ ಮರದಲ್ಲಿ ಹುಟ್ಟಿ ಬಂದ ಕೊಂಬೆಗಳೆ ಅದರ ಕೊಂಬಾಗಿರಲು ವಸಂತ ಋತುವೆಂಬ ಆನೆಯು ವಿರಹಿಗಳನ್ನು ತನ್ನ ದಂತದಿಂದ ತಿವಿದನು. ಈ ರೀತಿಯಾಗಿ ಪ್ರಕೃತಿಯಲ್ಲಿ ವಿರಹದ ಜ್ವಾಲೆ ಎದ್ದು ನಿಂತಿತು.

ಇಷ್ಟೊಂದು ಸೂಕ್ಷ್ಮವಾಗಿ ಹೇಳುವ ತಂತ್ರಗಾರಿಕೆ ಪಂಪನೆಂಬ ಕಲಾಕರನಿಗೆ ಮಾತ್ರ ಸಾಧ್ಯ. ಮಧುವನ್ನು ಸವಿಯುವನನು ಮನುಷ್ಯನಷ್ಟೇ ಪ್ರಕೃತಿಯು ಕೂಡಾ ಸುಖ ಭೋಗದಲ್ಲಿ ತನ್ಮಯತೆಯನ್ನು, ಪರಸ್ಪರ ಮೋಹಿಸುವಂತೆಯೂ ಕೊನೆಗೆ ದಾಂಪತ್ಯದಿಂದ ಸರಸ ವಿರಹವನ್ನು ಅನುಭವಿಸುವ ರೀತಿಯು ಶ್ಲಾಘನೀಯವಾಗಿದೆ, ಪ್ರೀತಿ ಅದೊಂದು ಅಮಲು, ಸವಿದಷ್ಟು ಸಿಹಿಯನ್ನೇ ಕೊಡುವುದು. ಈ ರೀತಿಯ ಮನುಷ್ಯ ಮತ್ತು ಪ್ರಕೃತಿಯ ಮಧ್ಯದಲ್ಲಿನ ಸಖ್ಯದ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಇಂತಹ ವಿರಹ ಪ್ರಕೃತಿಯನ್ನು ವಸಂತನ ಮತ್ತು ವನದೇವಿಯ ಮಧ್ಯದಲ್ಲಿ ಏರ್ಪಡಿಸಿಟ್ಟಿರುವುದು ಮನಸಿಗೆ ಮತ್ತು ಕಣ್ಣಿಗೆ ಸೋಜಿಗವನ್ನುಂಟು ಮಾಡಿದೆ. ವಚನ "ಅಂತು ಬಂದ ಬಸಂತದೊಳ್ ಮಾದ್ರಿ ತಾಮ ಗರ್ವವ್ಯಾಲೆಯಂ ಕ್ರೀಡಾನುಶೀಲೆಯು ಮಪ್ಪುದರಂ ವನಕ್ರೀಡಾನಿಮಿತ್ತದಿಂ ಪೋಗಿ.." ಅತ್ಯಂತ ಸುಂದರ ವ್ಯಾಕುಲದಿಂದ ಕೂಡಿದ ವನಶ್ರೀಯನ್ನು ಕಂಡು ಅಲ್ಲಿಗೆ ಬಂದು, ಅತ್ಯಂತ ಗರ್ವ ಹಾಗೂ ಮನೋಲ್ಲಾಸದಿಂದ ಆಟ

ಆಡಬೇಕೇಂದೆ. ಆ ಕಾಡಿಗೆ ಮಾದ್ರಿ ದಾವಿಸಿದಳು. ಪತಿಯಿದ್ದರೂ ಅವನ ಆಲಿಂಗನ ಬಯಸುವಂತಿರಲಿಲ್ಲ. ಆ ಎಲ್ಲ ವಿರಹಗಳನ್ನು ವನದೇವಿಗೆ ಅರ್ಪಿಸಲ್ಲೆಂದು ಬರುವಳು. ಆ ವಸಂತನ ದಯದಿಂದ ಎಲ್ಲ ಅರಣ್ಯವೂ ಪ್ರೀತಿಯ ಮಂತ್ರವೊಂದನ್ನು ಮಾತ್ರ ಉಸುರುತ್ತಿದ್ದವು. ಆ ವಿಚಾರವನ್ನು ತಿಳಿಯದ ಮಾದ್ರಿ ವನಕ್ರೀಡೆಗೆ ಎಂದು ಬರುವಳು. ಮುಂದೆ ಪಾಂಡು ರಾಜನ ಜೀವ ಹೋಗಬಹುದೆಂಬ ಅರೆಕ್ಷಣವು ವಿಚಾರ ಆಕೆಯ ಹತ್ತಿರವು ಸುಳಿಯಲಿಲ್ಲ. ನಿಸರ್ಗದ ಸುತ್ತಲೂ ಕಾಣುವ ನಾನಾ ರೂಪದ ಕಾರ್ಯಗಳನ್ನು ಒಂದೆಡೆ ಹಿಡಿದಿಡುವ ತಂತ್ರಗಾರಿಕೆ ಎಲ್ಲ ಕವಿಗಳಿಗೆ ಒಗ್ಗದ ಮಾತು. ಒಂದು ದೃಶ್ಯವನ್ನು ಭಾವನಾತ್ಮಕದ ಜೊತೆಗೆ ಪ್ರಕೃತಿಯನ್ನು ತೂಗಿಸಿ ನೋಡುವ ಪರಿಕಲ್ಪನೆ ಅಪರೂಪದಾದರು ಮಹತ್ವವನ್ನು ಪಡೆದುಕೊಂಡಿದೆ.

**ಉಪಸಂಹಾರ**

ಒಟ್ಟಿನಲ್ಲಿ ಈ ನಿಸರ್ಗದ ಚೆಲವು ಅದರ ಸೆಳೆತವನ್ನು ಮೈಮನಗಳ ಆಸೆಗೆ ಪ್ರೇರೆಪಿಸುವ, ಕಾತರಿಸುವ ಮತ್ತು ಬೆರೆಯುವ ಅಧಮ್ಯತನವನ್ನು ಪ್ರಬಲವಾಗಿ ಕಟ್ಟಿ ಹಾಕಿದೆ. ಪಾಂಡು ಮಾದ್ರಿಯ ಬದುಕು ಪ್ರಕೃತಿಯು ಪ್ರೇಮತ್ವ ಪರಿಭಾವನೆಯಲ್ಲಿ ವ್ಯಕ್ತಗೊಂಡು ಶಾಪದಲ್ಲಿ ಅಂತ್ಯವಾಗುವದಕ್ಕೂ ಪೋಷಕವಾಗುತ್ತದೆ. ಕಾವ್ಯದಲ್ಲಿ ಬರುವ ಈ ಪ್ರಕೃತಿಯುಕ್ತ ವಸಂತ ಋತು ಕಥೆಗೆ ಅನುಗುಣವಾಗಿ ಪಂಪನು ಚಿತ್ರಿಸಿರುವುದರಲ್ಲಿ ಔಚಿತ್ಯವಿದೆ. ಕೇವಲ ಸೌಂಧರ್ಯದ ಅನಾವರಣೆ ಇಲ್ಲಿ ಮುಖ್ಯವಲ್ಲದೆ ಬದುಕಿನ ಜೀವನ ದೃಷ್ಟಿಯಲ್ಲಿ ಹೇಗೆ ಪಾತ್ರ ವಹಿಸುತ್ತದೆ ಆಸೆ ಆತುರಕ್ಕೆ ಕಾರಣವಾಗಿ ನಿಸರ್ಗದ ಶಕ್ತಿ ಬದುಕಿನ ಸಂಚಯದಲ್ಲಿ ವ್ಯಕ್ತವಾಗುತ್ತದೆ ಎಂಬುದು ಕಾವ್ಯದಲ್ಲಿ ಕಂಡಿದ್ದಾನೆ.

**ಕೊನೆ ಟಿಪ್ಪಣಿಗಳು**

1. ಅನಂತರಂಗಾಚಾರ್.ಎನ್. ಪಂಪಭಾರತಂ. ಗದ್ಯಾನುವಾದ. ಕನ್ನಡ ಸಾಹಿತ್ಯ ಪರಿಷತ್, ದ್ವಿತೀಯಾಶ್ವಾಸಂ, ಪದ್ಯ13, ಪು.128.
2. ಅದೇ. ವಚನ, ಪು.127.
3. ಅದೇ. ಪದ್ಯ 14, ಪು.128.
4. ಅದೇ. ಪದ್ಯ 15, ಪು.129.
5. ಅದೇ. ವಚನ, ಪು.129.

**ಪರಾಮರ್ಶನ ಗ್ರಂಥಗಳು**


- ಅನಂತರಂಗಾಚಾರ್. ಎನ್ (2018). ಪಂಪ ಮಹಾಕವಿ ವಿರಚಿತ ಪಂಪಭಾರತ. ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್.
- ಶಿವರುದ್ರಪ್ಪ. ಜಿ.ಎಸ್. (2011). ಸೌಂದರ್ಯ ಸಮೀಕ್ಷೆ. ಕಾಮಧೇನು ಪುಸ್ತಕ ಭವನ.
- ಹಿರೇಮಠ. ಎಸ್.ಎಂ. (2017). ಚಂಪೂ ವೈವಿಧ್ಯ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.